ಶ್ರೀ ಎಚ್.ಟಿ. ಕೃಷ್ಣಪ್ಪ....ಇದರ ಬಗ್ಗೆ ವಿವರವಾದ ಉತ್ತರವನ್ನು ತರಿಸಿ ಅವರಿಗೆ ಕೊಡುತ್ತೇನೆ.

(೮) ವೈದ್ಯಕೀಯ ಸ್ನಾತಕೋತ್ತರ ವಿದ್ಯಾಭ್ಯಾಸಕ್ಕೆ ಆಯ್ಕೆ ಮಾಡುವುದರಲ್ಲಿ ಉಂಟಾದ ವ್ಯತ್ಯಾಸ

ಶ್ರೀ ಬಿ.ಎಸ್. ಯಡಿಯೂರಪ್ಪ....ಅಧ್ಯಕ್ಷರೇ, ಪಿ.ಜಿ. ವಿದ್ಯಾಭ್ಯಾಸದ ಬಗ್ಗೆ ನಮ್ಮ ರಾಜ್ಯದಲ್ಲಿ ನಡೆಸಲಾದ ಮೆಡಿಕಲ್ ಸ್ನಾತಕೋತ್ತರ ವಿದ್ಯಾಭ್ಯಾಸದ ಸಲುವಾಗಿ ನೆಡೆದ ಸೆಲೆಕ್ಷನ್‌ನಲ್ಲಿ ಈವರೆಗೆ ನಡೆದು ಬಂದ ಪದ್ಧತಿಯಂತೆ ನಡೆಯದೆ, ಸರ್ಕಾರಿ ಮೆಡಿಕಲ್ ಕಾಲೇಜಿನ ಮತ್ತು ಖಾಸಗಿ ಮೆಡಿಕಲ್ ಕಾಲೇಜಿನಲ್ಲಿ ಸರ್ಕಾರಿ ಸೀಟ್‌ಗಳಿಗೆ ಎಂದು ಪ್ರಚೋದಿಸಿ ಇಂಟರ್‌ವ್ಯೂಗಳು ಮುಗಿದ ನಂತರ ದಿನಾಂಕ ೨೭-೧-೮೭ ರಂದು ಕೇವಲ ಸರ್ಕಾರಿ ಕಾಲೇಜಿನ ಸೀಟುಗಳನ್ನು ಅನೌನ್ಸ್ ಮಾಡಿ ಸರ್ಕಾರಿ ಸೀಟುಗಳನ್ನು, ಪ್ರೈವೇಟ್ ಕಾಲೇಜುಗಳಲ್ಲಿ ಅನೌನ್ಸ್ ಮಾಡದಿರಲು ಕಾರಣವೇನು ? ಸರ್ಕಾರದ ನೀತಿ ಏನಾದರೂ ಬದಲಾಗಿದೆಯೆ ? ಮತ್ತು ಪ್ರತಿ ವರ್ಷ ಸೆಪ್ಟೆಂಬರ್ ತಿಂಗಳಲ್ಲಿ ಸೆಲೆಕ್ಷನ್ ಮಾಡುತ್ತಿದ್ದು ಈ ಸಾರಿ ಜನವರಿ ತಿಂಗಳವರೆಗೆ ಮುಂದುವರಿಸಿ ನಿರ್ಧಾರವಾಗಿ ಕರೆಯಲು ಕಾರಣವೇನು ? ಮತ್ತು ತರಾತುರಿಯಲ್ಲಿ ಸಮಯವಿಲ್ಲ ಕೊಡದೆ ೨೭-೧-೮೭ರಂದು ಆರ್ಜಿ ಕರೆದು ಕೊನೆ ತಾರೀಖು ೬.೧.೮೭ ಮಾಡಿದ ಕಾರಣವೇನು ? ಈ ರೀತಿ ಆರ್ಜಿಯನ್ನು ಕರೆಯಲು ಜನವರಿವರೆಗೆ ಮುಂದು ವರಿಸಲು ಕಾರಣ, ಯಾವುದೋ ಪ್ರೈವೇಟ್ ಮೆಡಿಕಲ್ ಕಾಲೇಜಿಗೆ ಅಫಿಲಿಯೇಷನ್ ಬಂದಿಲ್ಲದ ಕಾರಣ ಆದು ಬರುವವರೆಗೆ ಕಾದು ಈ ರೀತಿ ಮಾಡಿರುವುದು ನಿಜವೆ ಎಂಬ ಸಾರ್ವಜನಿಕ ಮಹತ್ವ ಪೂರ್ಣ ವಿಷಯದ ಬಗ್ಗೆ ಸರ್ಕಾರದ ಹೇಳಿಕೆ ತಿಳಿಯಬಯಸುತ್ತೇನೆ.

ಶ್ರೀ ಎಚ್.ಟಿ. ಕೃಷ್ಣಪ್ಪ....ಅಧ್ಯಕ್ಷರೇ, ಪ್ರಸಕ್ತ ಸಾಲಿನಲ್ಲಿ ಸ್ನಾತಕೋತ್ತರ ಕೋರ್ಸುಗಳ ವ್ಯಾಸಂಗಕ್ಕೆ ಆಯ್ಕೆ ಮಾಡಲು ಅನುಸರಿಸಿದ ಪದ್ಧತಿಯು ಹಿಂದಿನ ವರ್ಷಗಳಲ್ಲಿ ಅನುಸರಿಸಿದ ಪದ್ಧತಿಗಿಂತ ಏನೂ ವ್ಯತ್ಯಾಸವಾಗಿರುವುದಿಲ್ಲ. ದಿನಾಂಕ ೨೧-೧-೧೯೮೭ರಂದು ಸರ್ಕಾರೀ ಕಾಲೇಜುಗಳಲ್ಲಿರುವ ಸ್ನಾತಕೋತ್ತರ ಕೋರ್ಸುಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಸಮಿತಿಯಿಂದ ಆಯ್ಕೆ ಮಾಡಲಾಗಿದೆ. ಖಾಸಗೀ ಕಾಲೇಜುಗಳಲ್ಲಿ ಲಭ್ಯವಿರುವ ಸರ್ಕಾರೀ ಸೀಟುಗಳ ಸಂಖ್ಯೆಯನ್ನು ಇನ್ನೂ ಕೆಲವೇ ದಿವಸಗಳಲ್ಲಿ ನಿಗದಿಪಡಿಸಿ ಪ್ರಕಟಿಸಲಾಗುವುದು. ನಂತರ ಸದರೀ ಸೀಟುಗಳಿಗೆ ಆಯ್ಕೆ ಮಾಡಲಾಗುವುದು. ಈ ಬಗ್ಗೆ ಸರ್ಕಾರದ ನೀತಿಯಲ್ಲಿ ಯಾವ ಬದಲಾವಣೆಯಿಲ್ಲ. ಪ್ರತಿ ವರ್ಷ ಸ್ನಾತಕೋತ್ತರ ಕೋರ್ಸುಗಳಿಗೆ ಆಯ್ಕೆಯನ್ನು ಸೆಪ್ಟೆಂಬರ್ ಮಾಹೆಯಲ್ಲಿ ಮಾಡಲಾಗುತ್ತಿದೆಂಬುದು ನಿಜವಲ್ಲ. ಕಳೆದ ೧೯೮೬-೮೭ನೇ ಸಾಲಿನಲ್ಲೂ ಕೂಡ ೧೯೮೭ರ ಜನವರಿ-ಫೆಬ್ರವರಿ ಮಾಹೆಯಲ್ಲಿ ಮಾಡಲಾಗಿದೆ. ಆದರೂ ಕೂಡ ಇನ್ನೂ ಮೊದಲೇ ಮಾಡಬೇಕೆಂದು ಸರ್ಕಾರ ಉದ್ದೇಶಿಸಿದ್ದರೂ ಕೂಡ ಈ ಮುಂದೆ ವಿವಾಸಲಾತಿ ನೀತಿಯನ್ನು ೧೯೮೮ರ ಅಕ್ಟೋಬರ್ ಮಾಹೆಯಲ್ಲಿ ಬದಲಾವಣೆ ಮಾಡಿದ್ದು, ಆ ಬಗ್ಗೆ ವಿವಾಸಲಾತಿ ಸೌಲಭ್ಯವನ್ನು ಕೋರುವ ಅಭ್ಯರ್ಥಿಗಳು ಸಲ್ಲಿಸುವ ಆರ್ಜಿ ನಮೂನೆಗಳನ್ನು ಬದಲಾಯಿಸಿ ಹೊರಡಿಸಿದ್ದರಿಂದ ಸ್ನಾತಕೋತ್ತರ ಕೋರ್ಸುಗಳಿಗೆ ಈ ಮೊದಲೇ ಆಯ್ಕೆ ಮಾಡಲು ಸಾಧ್ಯವಾಗಲಿಲ್ಲ.

ಮೇಲ್ಕಂಡ ಕಾರಣಗಳಿಂದ ಸ್ನಾತಕೋತ್ತರ ಕೋರ್ಸುಗಳಿಗೆ ಆಯ್ಕೆ ಮಾಡುವುದು ವಿಳಂಬವಾಗಿದೆ. ಸ್ನಾತಕೋತ್ತರ ಕೋರ್ಸುಗಳಿಗೆ ಇಚ್ಛಿಸುವ ಅಭ್ಯರ್ಥಿಗಳು ಆರ್ಜಿ ಸಲ್ಲಿಸಲು ದಿನಾಂಕ ೬-೧-೧೯೮೭ರ ವರೆವಿಗೆ ಕೊಡಬೇಕಾಯಿತು. ಯಾವುದೇ ಖಾಸಗೀ ಕಾಲೇಜಿಗೆ ಅಫಿಲಿಯೇಷನ್ ಬಂದಿಲ್ಲದ ಕಾರಣ ಆದು ಬರುವವರೆವಿಗೆ ಸ್ನಾತಕೋತ್ತರ ಕೋರ್ಸುಗಳಿಗೆ ಆಯ್ಕೆಯನ್ನು ವಿಳಂಬ ಮಾಡಲಾಯಿತೆಂಬುದು ನಿಜವಲ್ಲ.

(೯) ಹಾಲು ಸರಬರಾಜು ಮಾಡುವ ಸಂಘಗಳಿಗೆ ದಣಿ ಹಾವತಿ ಮಾಡುವುದರಲ್ಲಿ ವಿಳಂಬ

ಶ್ರೀ ಆರ್. ಪುಟ್ಟಸ್ವಾಮಿಯ್ಯ....ಅಧ್ಯಕ್ಷರೇ, ಮಂಡಿಸಲಾಗಿರುವ ಬೇಡಿಕೆಗಳ ಮೇಲೆ ಮಾತನಾಡಲು ನಿಂತಿದ್ದೇನೆ. ಬೆಂಗಳೂರು ಹಾಲು ಒಕ್ಕೂಟದಲ್ಲಿ ಹಾಲನ್ನು ಹಾಕಿರುವ ಸಣ್ಣ ಸಣ್ಣ ಹಳ್ಳಿಗಳಲ್ಲಿ ಬರುವಂಥ ರೈತರಿಗೆ ಲಕ್ಷಾಂತರ ಜನರಿಗೆ ತೊಂದರೆಯಾಗುತ್ತಿದೆ. ಹಾಗೂ ಹೈನು ಉದ್ಯಮಕ್ಕೆ ಬಲವಾದ ಪೆಟ್ಟು

ಬಿದ್ದಂತಾಗಿದೆ. ಹೈನುಗಾರಿಕೆಯ ಜೀವನಮಾರ್ಗವೆಂದು ನಂಬಿರುವವರಿಗೆ ಬಹಳ ತೊಂದರೆಯಾಗುತ್ತಿದೆ. ಈ ರೀತಿಯಲ್ಲಿ ಇದು ಸಾರ್ವಜನಿಕ ಮಹತ್ವದ ಜರೂರು ವಿಷಯವಾದ್ದರಿಂದ ಸದನದಲ್ಲಿ ಪ್ರಸ್ತಾಪ ಮಾಡಬಯಸುತ್ತೇನೆ.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ರೇಷ್ಮೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು).—ಬೆಂಗಳೂರು ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಬೆಂಗಳೂರು ಇದರ ಕಾರ್ಯವ್ಯಾಪ್ತಿಯಲ್ಲಿ ಡಿಸೆಂಬರ್ ೧೯೮೬ರ ಅಂತ್ಯಕ್ಕೆ ೯೪೦ ಹಾಲು ಉತ್ಪಾದಕರ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು, ಈ ಸಂಘಗಳ ಮೂಲಕ ಸುಮಾರು ೫.೮೬ಲಕ್ಷ ಕೆ. ಜಿ. ಹಾಲನ್ನು ದಿನವೊಂದಕ್ಕೆ ಸಂಗ್ರಹಿಸಲಾಗುತ್ತಿದೆ. ಈ ಸಂಘಗಳಲ್ಲಿ ೧,೫೫,೧೪೯ ಜನ ಸದಸ್ಯರಿದ್ದು, ಈ ಒಕ್ಕೂಟದ ಕಾರ್ಯವ್ಯಾಪ್ತಿಯಲ್ಲಿ ಹಾಲು ಉತ್ಪಾದಕರಿಗೆ ವಾರ ಒಂದಕ್ಕೆ ಅಂದಾಜು ರೂ. ೬೦-೦೦ ಲಕ್ಷದಿಂದ ೧೦೦-೦೦ ಲಕ್ಷಗಳಷ್ಟು ಹಣವನ್ನು ಹಾಲು ಉತ್ಪಾದಕರಿಗೆ, ಒಕ್ಕೂಟದವರು ಸಂಘಗಳ ಮುಖಾಂತರ ಬಟವಾಡೆ ಮಾಡುತ್ತಾರೆ. ಆರ್ಥಿಕ ಮುಗ್ಗಟ್ಟಿನಿಂದಾಗಿ ವಾರಕ್ಕೆ ಒಂದಾವರ್ತಿ ಹಣವನ್ನು ಸಂದಾಯ ಮಾಡುವುದು ಈಗ ಕಷ್ಟವಾಗುತ್ತಿದೆ. ಹಾಲು ಉತ್ಪಾದಕರಿಗೆ ಈಗಾಗಲೇ ದಿನಾಂಕ ೭-೧-೧೯೮೭ ರವರೆಗೆ ಸಿಗದಿತ ಹಾಲಿನ ಬೆಲೆಯನ್ನು ಸಂದಾಯ ಮಾಡಲಾಗಿದೆ. ಈಗ ಸುಮಾರು ರೂ. ೧೫೬.೬೬ ಲಕ್ಷ ರೂಪಾಯಿಗಳಷ್ಟು ಹಣವನ್ನು ಹಾಲು ಉತ್ಪಾದಕರಿಗೆ ಕೊಡಬೇಕಾಗಿದ್ದು, ಕರ್ನಾಟಕ ಹಾಲು ಉತ್ಪಾದಕರ ಮಹಾಮಂಡಲಿಯು, ಈ ವಿಷಯವಾಗಿ ವೀಕ್ಷ್ಯವಾಗಿ ಹಣ ಒದಗಿಸಲು ಸರ್ವ ಪ್ರಯತ್ನ ಮಾಡುತ್ತಿದೆ.

(೧೦) ಪೋಲೀಸ್ ಸ್ಟೇಷನ್‌ಗಳಿಗೆ ಸ್ಟೇಷನರಿ ಸಾಮಾನುಗಳನ್ನು ಸರಿಯಾಗಿ ಸರಬರಾಜು ಮಾಡದಿರುವುದು.

ಶ್ರೀ ವೇದಾಂತ ಹೆಮ್ಮಿಗೆ.—ಕರ್ನಾಟಕದಲ್ಲಿರುವ ಪೋಲೀಸ್ ಸ್ಟೇಷನ್‌ಗಳಲ್ಲಿ ಬರೆಯುವ ಕಾಗದ, ಪೆನ್ಸಿಲ್, ಶಾಯಿ ಹಾಗೂ ಇತರೆ ಸ್ಟೇಷನರಿ ಸಾಮಾನುಗಳನ್ನು ಪೋಲೀಸರೇ ಕಳೆದ ಹಲವಾರು ವರ್ಷಗಳಿಂದ ಕೈಯಿಂದ ಹಣ ಹಾಕಿಕೊಳ್ಳಬೇಕಾಗಿದೆಯೆಂದೂ ಇದಕ್ಕಾಗಿ ಸರ್ಕಾರವು ಯಾವ ಹಣವನ್ನು ಮಂಜೂರು ಮಾಡುತ್ತಿಲ್ಲವೆಂದೂ ತಿಳಿದು ಬಂದಿದೆ. ನಿಜವಾಗಲೂ ಇದು ಆಶ್ಚರ್ಯಕರ ಹಾಗೂ ವಿಷ್ಯಯ ಉಂಟು ಮಾಡುವ ಸಂಗತಿ. ಆಯವ್ಯಯದಲ್ಲಿ ಸ್ಟೇಷನ್‌ಗಳಿಗೆ ಕಳೆದ ವಾರಿ ಸ್ಟೇಷನರಿ ಕೊಳ್ಳಲು ಪೋಲೀಸ್ ಇಲಾಖೆಯು ಸ್ಟೇಷನ್‌ಗಳಿಗೆ ಕಳೆದ ವಾರಿ ಒಟ್ಟು ಮಂಜೂರು ಮಾಡಿದ ಹಣವೆಷ್ಟು ? ವರ್ಷಕ್ಕೆ ಪ್ರತಿ ಸ್ಟೇಷನ್‌ಗೂ ಎಷ್ಟು ಹಣ ಕೊಟ್ಟಿದ್ದೀರಿ ? ಇದುವರಿಗೂ ಈ ವ್ಯವಸ್ಥೆ ಆಗದಿದ್ದರೆ ಇನ್ನು ಮುಂದಾದರೂ ಸ್ಟೇಷನರಿ ಕೊಳ್ಳಲು ಪೋಲೀಸ್ ಸ್ಟೇಷನ್‌ಗಳಿಗೆ ಹಣ ಮಂಜೂರು ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೆ, ಇವತ್ತು ಬೆಳಿಗ್ಗೆ ಈ ಪ್ರಶ್ನೆ ಬಂತು. ಆದಕ್ಕೋಸ್ಕರ ವಿವರವಾದ ಹೇಳಿಕೆಯನ್ನು ಕೊಡುವುದಕ್ಕೆ ಆಗಲಿಲ್ಲ. ಬಜೆಟ್‌ನಲ್ಲಿ ಎಷ್ಟು ಹಣ ಒದಗಿಸಲಾಗಿದೆಯೆಂದು ಕೇಳಿರುವುದರಿಂದ, ಮುಂದಿನ ಬಜೆಟ್‌ನಲ್ಲಿ ನಿಲ್ಲವನ್ನು ಸೇರಿಸಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಡಿ. ಟಿ. ಜಯಕುಮಾರ್.—ನಾನು ಕೊಟ್ಟಿದ್ದೇನೆ.

ಅಧ್ಯಕ್ಷರು.—ಇಲ್ಲಿ ಬಂದಿಲ್ಲ, ಮತ್ತೊಂದು ಕೊಡಿ.

(೧೧) ಪ್ರಾಂಗಳೂರಿನ ಬೆಂಗರೆಯಲ್ಲಿ ಮನೆ ಕಟ್ಟುವಲು ಲೈಸೆನ್ಸ್ ನೀಡದಿರುವವರಿಗೆ ಲೈಸೆನ್ಸ್ ಕೊಡುವ ಬಗ್ಗೆ

ಶ್ರೀ ಬಿ. ಎಂ. ಇದಿನಬ್ಬ.—ಮೀನುಗಾರರ ಕ್ಷೇತ್ರದ ಬೆಂಗರೆಯಲ್ಲಿ ಸುಮಾರು ಪೂರ್ತಿ ನಾವಿಕರ್ಕೂ ಮೀಕ್ಕಿ ಮೀನುಗಾರರು, ಅಲ್ಪಸಂಖ್ಯಾತ ಬಡ ಮುಸ್ಲಿಮರು ಹೆಚ್ಚಾಗಿರುತ್ತಾರೆ. ವಿಳ್ಳಶಾ ಧಿನಿತ್ಯ ದುಡಿದು ಜೀವನವ ಬಡವರು. ಇಲ್ಲಿ ಅನೇಕ ಮೀನುಗಾರರು, ಮುಸ್ಲಿಮರು ಮನೆ ಕಟ್ಟಿಕೊಂಡು ಜೀವಿಸುತ್ತಿದ್ದಾರೆ. ಈ ಬಾಬ್ತು ಒಂಕ್ಕೂ ಮೀಕ್ಕಿದ ಬಡವರಿಗೆ ಪಟ್ಟಣ ಪಂಚಾಯತಿನ ಅಧಿಕಾರಿಗಳು ಮನೆ ಕಟ್ಟಿಕೊಂಡ ಬಗ್ಗೆ ಲೈಸೆನ್ಸ್ ಕೊಡದೆ ಅನಾವಶ್ಯಕ ತೊಂದರೆ ಕೊಡುತ್ತಿದ್ದಾರೆ. ಈ ವಿಷಯವನ್ನು ಹಿಂದಿನ ಮೀನುಗಾರಿಕಾ ಸಚಿವರಿಗೂ, ಈ ಹಿಂದೆ ಮೈಂಗಳೂರಿಗೆ ಒಂದಾಗ ಬಂದಿನ ಪಟಪರಾದ ಶಾಸಿಗೂ ವಿವೇದಿಸಿ